ಶ್ರೀ ಎಸ್. ಬಿ ನಾಗರಾಳ್.—ಈ ರೀತಿ ಸಾಗುವಳಿ ಮಾಡುವುದರಿಂದ ಕೆರೆಗಳಲ್ಲಿ ಸಿಲ್ಟ್ ಬಂದು ಸೇರಿಕೊಳ್ಳುತ್ತದೆಂಬುದು ನಿಜ. ಇದನ್ನು ತಪ್ಪಿಸುವ ಉದ್ದೇಶದಿಂದ, ಕೆರೆಯ ಅಂಚಿನಲ್ಲಿರುವ ಜಮೀನನ್ನು ಯಾರಿಗೂ ಅಲಾಟ್‌ಮೆಂಟ್ ಮಾಡಬಾರದೆಂದು ರೆವಿನ್ಯೂ ಇಲಾಖೆಯವರಿಗೆ ವಿನಂತಿ ಮಾಡಿಕೊಳ್ಳಲಾಗಿದೆ

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಯಾವುದೋ ಒಂದು ಕಾಲದಲ್ಲಿ ಅಂದರೆ ಕ್ಷಾಮ ಡಾಮರಗಳು ಬಂದಾಗ ಕೆಲವರು ಇಂತಹ ಜಮೀನನ್ನು ಸಾಗುವಳಿ ಮಾಡತಕ್ಕಂಥ ಪರಿಸ್ಥಿತಿ ಇತ್ತು; ಇನ್ನು ಮೇಲಾದರೂ ಈ ರೀತಿಯ ಅಕ್ರಮ ಸಾಗುವಳಿಗೆ ಆಸ್ಪದ ಕೊಡುವುದಿಲ್ಲ ಎನ್ನುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಸ್.ಬಿ. ನಾಗರಾಳ್.—ಇಂತಹ ಅಕ್ರಮ ಸಾಗುವಳಿಗೆ ಅವಕಾಶ ಕೊಡಬಾರದೆಂದು ಸಂಬಂಧಪಟ್ಟ ಅಧಿಕಾರಸ್ಥರಿಗೆ ಆದೇಶ ಕೊಡಲಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಈಗ ಹೊಸದಾಗಿ ಕೆರೆಗಳನ್ನು ಕಟ್ಟಿಸಿಕೊಡಿ ಮಂತ್ರಿ, ಕೆರೆಗಳಲ್ಲಿರತಕ್ಕಂಥ ಹೂಳನ್ನು ತೆಗೆಸಿ ಎಂಬುದಾಗಿ ಸರ್ಕಾರದ ಮೇಲೆ ಕೆಲವರು ಒತ್ತಾಯ ತರುತ್ತಿದ್ದರೆ, ಮತ್ತೆ ಕೆಲವರು ಕೆರೆಗಳ ಅಂಚಿನಲ್ಲಿ ಅಕ್ರಮ ಸಾಗುವಳಿ ಮಾಡುತ್ತಿದ್ದಾರೆ. ಇದರಿಂದ ಆ ಕೆರೆಗಳಿಗೆ ಮಣ್ಣು ಬಂದು ತುಂಬಿಕೊಂಡು ನೀರು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹವಾಗುತ್ತಿಲ್ಲ. ಈ ರೀತಿಯಿಂದ ಅಕ್ರಮ ಸಾಗುವಳಿ ಮಾಡುತ್ತಿರುವವರನ್ನು ಬಿಡಿಸುವ ಬಗ್ಗೆ ಸರ್ಕಾರ ಸಾಕಷ್ಟು ರೀತಿಯಲ್ಲಿ ಗಮನ ಹರಿಸಿಲ್ಲ ಎಂಬುದು ನಿಜವಲ್ಲವೇ? ಈಗ ತುರ್ತುಪರಿಸ್ಥಿತಿ ಜಾರಿಯಲ್ಲಿರುವ ಕಾರಣ ಈ ರೀತಿ ಅಕ್ರಮ ಸಾಗುವಳಿ ಮಾಡಿರತಕ್ಕವರನ್ನು ಅಲ್ಲಿಂದ ಬಿಡಿಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್.ಬಿ. ನಾಗರಾಳ್. ಈ ವಿಚಾರದಲ್ಲಿ ಸರ್ವೆ ಮಾಡಿಸಲಾಗುತ್ತಿದೆ. ಆ ಸರ್ವೆಯ ರಿಪೋರ್ಟ್ ಸರ್ಕಾರಕ್ಕೆ ಬಂದಮೇಲೆ ಮುಂದೆ ಏನು ಕ್ರಮ ಕೈಗೊಳ್ಳಬೇಕೆಂಬುದನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸುತ್ತದೆ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಕೊನೆಯ ಪ್ರಶ್ನೆಗೆ ಉತ್ತರವಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದು ಹೇಳಲಾಗಿದೆ. ಈಗ ಯಾರು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ, ಅಂತಹ ಜಮೀನನ್ನು ತಕ್ಷಣವೇ ಸರ್ಕಾರಕ್ಕೆ ವಶಪಡಿಸಿಕೊಳ್ಳಬೇಕೆಂದು ರೆವಿನ್ಯೂ ಇಲಾಖೆಯಿಂದ ತೀರ್ಮಾನ ತೆಗೆದುಕೊಂಡು, ಅದನ್ನು ಜಾರಿಗೆ ತರುತ್ತಿದ್ದಾರೆ. ಆದರೆ ಕೆರೆಯ ಅಂಚಿನಲ್ಲಿ ಯಾರು ಅಕ್ರಮವಾಗಿ ಸಾಗುವಳಿ ಮಾಡಿದ್ದಾರೆ, ಅಂತಹವರ ಬಗ್ಗೆ ಇನ್ನೂ ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಎಸ್.ಬಿ. ನಾಗರಾಳ್.—ಈಗ ಈ ವಿಚಾರದಲ್ಲಿ ಸರ್ವೆ ಕ್ರಮ ಕೈಕೊಳ್ಳಲಾಗಿದೆ. ಆ ಕೆಲಸ ಮುಗಿದ ನಂತರ ಮುಂದೆ ಏನು ಕ್ರಮ ಕೈಗೊಳ್ಳಬೇಕೆಂಬುದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ ಎಂಬುದಾಗಿ ಈಗಾಗಲೇ ಹೇಳಿದ್ದೇನೆ.

Vacancies in the Directorate of Women and Child Welfare

589. SMT. VIJAYA DESAI (Chittapur).—Will the Minister of State for Women and Children's Welfare be pleased to state.—

(*a*) the number of vacancies in the Directorate of Women and Child Welfare (districtwise vacancies be furnished);

(*b*) what action the Government intend taking to fill up these vacancies at the earliest;

(*c*) whether the Government intend to fill up the vacancies by appointing local candidates?

SMT MANORAMA MADHWARAJ (Minister of State for Women and Children's Welfare.

(*a*) Statement appended.

(*b*) The Seniority List of Class III Posts has been recently finalised by the Director of Women and Children's Welfare, and action will be taken to fill the Class II posts as per rules;

Regarding Class I posts the Seniority List of Class II posts is not yet finalised as also recruitment rules. Action will be taken to fill up these posts soon after the seniority and recruitment rules are finalised

(*c*) No.

STATEMENT

(5 Class-I Posts and 13 Class II (Gazetted Posts) or vacant.) Districtwise vacancies are furnished bellow:—

DISTRICT	CLASS-I	CLASS-II
1. Bangalore	2 Deputy Directors 3 Assistant Directors (*a*) Senior Inspector of Certified Schools. (*b*) Special Officer (SNP) (*c*) Assistant Director	4 Posts: (*a*) Junior Inspector. (*b*) Superintendent, Instn , for M.R.C. (*c*) Regional Probation Superintendent. (*d*) Office Manager
2, Dharwar	...	2 Posts (*a*) Juvenile Service Bureau (*b*) Superintendent, State Home for Women Hubli.
3. Chitradurga	...	1 Juvenile Service Bureau,
4. Bijapur	...	1 Industrial and Agricultural Settlement.
5. Shimoga	...	1 Certified School.
6. Mysore	...	1 State Home for Women
7. Bellary	...	1 State Home for Women.
8. Mangalore	...	2 Posts: (*a*) Certified School (*b*) State home for Women.
Total 5 Posts		13 Posts

ಶ್ರೀಮತಿ ವಿಜಯ ದೇಸಾಯಿ.—ಈ ಸೀನಿಯಾರಿಟಿ ಪಟ್ಟಿಯಂನ್ನು ಯಾವಾಗ ಅಂತಿಮಗೊಳಿಸಲಾಯಿತೆಂಬುದನ್ನು ಹೇಳುತ್ತೀರಾ?

†ಶ್ರೀಮತಿ ಮನೋರಮಾ ಮಧ್ವರಾಜ್.—ತಾ।। ೩–೨–೧೯೭೬ ರಂದು,

ಶ್ರೀಮತಿ ವಿಜಯ ದೇಸಾಯಿ.—(೧) ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಯಾರನ್ನಾದರೂ ನೇರವಾಗಿ ನೇಮಕ ಮಾಡುವುದನ್ನು ಯೋಚನೆ ಮಾಡಿದ್ದೀರಾ?

ಶ್ರೀಮತಿ ಮನೋರಮಾ ಮಧ್ವರಾಜ್.—ಕಾನೂನಂ ಪ್ರಕಾರ ಪಿ.ಎಸ್ ಸಿ. ಅವರೂ ಈ ಹುದ್ದೆಗಳನ್ನು ಭರ್ತಿ ಮಾಡುತ್ತಾರೆ.

ಶ್ರೀಮತಿ ವಿಜಯ ದೇಸಾಯಿ.—ಈ ಹುದ್ದೆಗಳೆಲ್ಲಾ ಯಾವಾಗಿನಿಂದ ಖಾಲಿ ಇವೆ ಎಂಬುದನ್ನು ಹೇಳುತ್ತೀರಾ?

SMT. MANORAMA MADHWARAJ.—

Deputy Directors From	...	14-11-1975
Assistant Directors	...	,,
Jr. Inspector of C.S.	...	20-10-1975
Office Manager		14-11-1975
Juvenile Service Bureau, Dharwar	...	,,
State Home for Women, Hubli	...	10-10-1972
Juvenile Service Bureau, Davangere	...	22-10-1974
Industrial and Agricultural Settlement Bijapur.	...	14-7-1969
Certified School, Shimoga	...	11-12-1975
Institution for Mentally Handicapped Children, Bangalore.	...	22-3-1972
Regional Probation Supdt., Bangalore.	...	3-6-1975
State Home for Women Udipi.	...	5-7-1975
Stree Seva Niketan, Bellary	...	2-7-1975
State Home for Women, Mysore	...	1-3-1976
Certified School, Udipi	...	24-12-1975

ಶ್ರೀ ಎಂ.ಎಸ್. ಕೃಷ್ಣನ್.—ಈ ಹುದ್ದೆಗಳಲ್ಲಿ ಹೊಸದಾಗಿ ರಚನೆಮಾಡಿರುವುದು ಎಷ್ಟು, ಹಳೆಯದು ಎಷ್ಟು? ಹೊಸದಾಗಿ ರಚನೆ ಮಾಡಿದ್ದರೆ ಯಾವ ಒಂದು ಆಧಾರದ ಮೇಲೆ ಅವನ್ನು ಮಾಡಿದ್ದೀರಿ?

ಶ್ರೀಮತಿ ಮನೋರಮಾ ಮಧ್ವರಾಜ್.—ಇದು ಹೊಸದಾಗಿ ಭರ್ತಿ ಮಾಡಿದ್ದಲ್ಲ.

ತುಮಕೂರು ಜಿಲ್ಲೆ ಹಾಗೂ ನಾಗಮಂಗಲ ತಾಲೂಕುಗಳಿಗೆ ನೀರನ್ನು ಸರಬರಾಜು ಮಾಡುವುದು,

೬೦೪. ಶ್ರೀ ಬೈರಪ್ಪಾಜಿ (ತುರುವೇಕೆರೆ).—ಭಾರಿ ಹಾಗೂ ಮಧ್ಯಮ ನೀರಾವರಿ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ತುಮಕೂರು ಜಿಲ್ಲೆಗೆ ಹಾಗೂ ನಾಗಮಂಗಲ ತಾಲೂಕುಗಳಿಗೆ ವ್ಯವಸಾಯಕ್ಕಾಗಿ ನೀರೊದಗಿಸಲು ಅವಶ್ಯಕವಾಗಿರುವ ಪ್ರಥಮ ಹಂತದ ಕಾಲೆಯನ್ನು ಆಗಲು ಮಾಡಲು ಸರಕಾರ ಆರು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿರುವುದು ನಿಜವೇ;